ವಿಷಯ: ರಾಜ್ಯದಲ್ಲಿರುವ ಅಂಗವಿಕಲ ಸಂಖ್ಯೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 1338 (2041)

ಶ್ರೀ ಬಿ. ಎಂ. ಇದಿನಬ್ಬ (ಉಳ್ಳಾಲ) ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯದಲ್ಲಿರುವ ಅಂಗವಿಕಲರು ಎಷ್ಟು.

ಆ) ಇವರ ಅಭಿವೃದ್ಧಿಗಾಗಿ ಸರ್ಕಾರ ತೆಗೆದುಕೊಂಡ ಕ್ರಮಗಳೇನು.

ಇ) ಅಂಗವಿಕಲರು ದೈಹಿಕವಾಗಿ ಅಸಮರ್ಥರಿದ್ದರೂ ವಿದ್ಯಾವಂತರಿಗೆ ಹುದ್ದೆ ಗಳಲ್ಲಿ ಮೀಸಲಾತಿ ಸೌಲಭ್ಯ ಒದಗಿಸುವುದೇ ?

ಈ) ದಕ್ಷಿಣ ಕನ್ನಡ ವಿದ್ಯಾವಂತ ಅಂಗವಿಕಲರಿಗೆ ಸರ್ಕಾರ ಏನಾದರೂ ಸೌಲಭ್ಯ ಒದಗಿಸಿದೆಯೇ ? ಹಾಗಿದ್ದಲ್ಲಿ, ಅದರ ವಿವರ ಒದಗಿಸುವುದು.

ಶ್ರೀ ಬಿ. ಶಿವಣ್ಣ (ಸಮಾಜ ಕಲ್ಯಾಣ ಸಚಿವರು)

ಅ) 3,43,898

ಆ) ಈ ಕೆಳಕಂಡ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ :-

1) ಶಿಕ್ಷಣ ಮತ್ತು ತರಬೇತಿ
2) ಅಂಗವಿಕಲ ವಿದ್ಯಾರ್ಥಿಗಳಿಗೆಲ್ಲಾ ವಿದ್ಯಾರ್ಥಿ ವೇತನ
3) ಅಂಗವಿಕಲರಿಗಾಗಿ 'ಸಿ' ಮತ್ತು 'ಡಿ' ವರ್ಗ ಹುದ್ದೆಗಳಲ್ಲಿ ಪ್ರತಿಶತ 4 ರಷ್ಟು ಮೀಸಲಾತಿ
4) ಅಂಗವಿಕಲರಿಗೆ ಮಾಸಿಕ ರೂ. 50-00 ರಂತೆ ಪೋಷಣಾ ಭತ್ಯೆ
5) ಅಂಗವಿಕಲರಿಗೆ ಸಾಧನ ಸಲಕರಣೆಗಳು ಅಂದರೆ ತ್ರಿಚಕ್ರ ವಾಹನ, ಕ್ಯಾಲಿಫರ್ಸ್, ವೀಲ್ಸ್‌ಛೇರ್, ಶ್ರವಣ ಸಾಧನಗಳು ಮತ್ತು ಅಂಧರಿಗೆ ಬ್ರೈಲ್ ವಾಚುಗಳು ಮೊದಲಾದುವುಗಳ ಹಂಚಿಕೆ.
6) ಸ್ವಯಂ ಉದ್ಯೋಗಕ್ಕಾಗಿ ಆರ್ಥಿಕ ನೆರವು. ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆಯ ಮೂಲಕ ಉತ್ಪಾದನಾ ಘಟಕಗಳನ್ನು ಸ್ಥಾಪಿಸಲು ರೂ.25,000 ರವರೆಗೆ ಶೇಕಡ 25ರಷ್ಟು ಸಬ್ಸಿಡಿಯಲ್ಲಿ ಸಾಲ.
7) ಬ್ರೈಲ್ ಮುದ್ರಣ ಪುಸ್ತಕಗಳ ಪೂರೈಕೆ
8) ವೃತ್ತಿ ತರಬೇತಿ.
9) ಪ್ರತಿಭಾನ್ವಿತ ಅಂಗವಿಕಲ ವಿದ್ಯಾರ್ಥಿಗಳಿಗೆ ಬಹುಮಾನ ಯೋಜನೆ
10) ಅಂಗವಿಕಲ ನೌಕರರು ಮತ್ತು ತರಬೇತಿದಾರರಿಗೆ ವಸತಿ ಸೌಕರ್ಯ

ಇ) ಹೌದು.

ಈ) ರಾಜ್ಯದಲ್ಲಿ ಅಂಗವಿಕಲರಿಗಾಗಿ 'ಸಿ' ಮತ್ತು 'ಡಿ' ಹುದ್ದೆಗಳಲ್ಲಿ ಪ್ರತಿಶತ 4 ರಷ್ಟು ಮೀಸಲಾತಿ ಸೌಲಭ್ಯ ಒದಗಿಸಲಾಗಿದೆ. ಇದು ದಕ್ಷಿಣ ಕನ್ನಡ ಜಿಲ್ಲೆಗೂ ಅನ್ವಯಿಸುತ್ತದೆ. ದಕ್ಷಿಣ ಕನ್ನಡ ಜಿಲ್ಲೆಯವರಿಗಾಗಿಯೇ ಪ್ರತ್ಯೇಕ ಮೀಸಲಾತಿ ಒದಗಿಸಿಲ್ಲ. ಆದುದರಿಂದ ವಿವರಗಳನ್ನು ಒದಗಿಸುವ ಪ್ರಶ್ನೆ ಉದ್ಭವಿಸುವುದಿಲ್ಲ.